# ಉರುಳಿಸಲು ಸಂಚು, ಉಳಿಸಲು ಪಣ

ಅವರು ಮುಖ್ಯಮಂತ್ರಿಗಳಾಗಿದ್ದರಿಂದಲೇ ತಮಗೆ ಉಪಮುಖ್ಯಮಂತ್ರಿಯಿರಲಿ, ಮಂತ್ರಿಪದವಿಯೂ ದಕ್ಕದಾಯಿತು. ಒಂದೇ ಜಿಲ್ಲೆಗೆ ಎರಡೆರಡು ಪ್ರಮುಖ ಖಾತೆಗಳೇ ಎಂದು ಜನ ಆಡಿಕೊಳ್ಳುತ್ತಾರೆಂಬ ಮಾತು ಕೇಳಿಬಂದರೂ, ತನ್ನನ್ನು ಬೆಳೆಯದಂತೆ ತಡೆಯಬೇಕೆಂಬುದೇ ಪ್ರಮುಖ ಧೋರಣೆ ಎಂಬುದನ್ನು ಅರಿತಿದ್ದ ಆತ, ಮುಖ್ಯಮಂತ್ರಿಗಳು ಏನು ನಿರ್ಧಾರ ತೆಗೆದುಕೊಂಡರೂ ಅದಕ್ಕೆ ತದ್ವಿರುದ್ಧ ಹೇಳಿಕೆ ನೀಡುವ ಮೂಲಕ ಅವರ ಕಾಲೆಳೆಯುತ್ತಿದ್ದ. ಇದೇ ಸಿಕ್ಕಿದ್ದೇ ಅವಕಾಶ ಸಾಕೆಂದುಕೊಂಡು, ಸಹಾಯಕ ಇಂಜಿನಿಯರ್‌ಗೆ ಫೋನು ಮಾಡಿ, 'ನೋಡಪ್ಪ, ನೀವು, ನಿಮ್ಮ ಮುಖ್ಯಮಂತ್ರಿಗಳು ಏನೋ ತೀರ್ಮಾನ ಮಾಡಿದ್ದೀರಂತಲ್ಲ... ಅದರೊಳಗೆ ಆ ಮೂಲೆ ಅಂಗಡಿ ಶಾಂತಕ್ಕನಿಗೆ ಜಾಸ್ತಿ ಪರಿಹಾರ ಕೊಡುಸ್ಬೇಕು... ಏನು?... ಆಗಲ್ವ... ಯಾಕೆ? ನಾರ್ಮ್ಸ್ ಏನು ಅಂತ ನನಗೂ ಗೊತ್ತೂರೀ... ಅವರಿಗೆ ಮೂರು ಹೆಣ್ಣುಮಕ್ಕಳವೆ. ಗಂಡ ಇಲ್ಲದ ಆ ಯಮ್ಮ ಇದುನ್ನೇ ಆಧಾರವಾಗಿಟ್ಟುಕೊಂಡು ಯಾರ ಬಾಯಿಗೂ ಬೀಳದಂತೆ ಸಂಸಾರ ಮಾಡ್ತಾ ಇದೆ. ನಾಳೆ ಏನಾದ್ರೂ ನೀವು ಬೀದಿಪಾಲು ಮಾಡಿದ್ರೆ, ಪಾಪ ಆ ಹೆಣ್ಣುಮಕ್ಕಳು ಹೊಟ್ಟೆಗಿಲ್ಲದೇ ಏನಾದ್ರೂ ಪಾಪದ ಕೆಲಸ ಮಾಡುದ್ರೆ, ಅವರಿಗಷ್ಟೇ ಅಲ್ಲ, ಇಡೀ ಸಮಾಜಕ್ಕೇ ಕೆಟ್ಟ ಹೆಸರು ಬರ್ತದೆ... ಗೊತ್ತಾಯ್ತ. ನಿಮ್ಮ ಮೇಲಾಧಿಕಾರಿಗೆ ಹೇಳಿ ಒಪ್ಪೊಸೋ ಜವಾಬ್ದಾರಿ ನಿಮ್ದು. ಇಲ್ಲ ಅಂದ್ರೆ ನಾನು ಅಸೆಂಬ್ಲಿಯೊಳಗೆ ಹಕ್ಕುಚ್ಯುತಿ ನಿರ್ಣಯ ಮಂಡುಸ್ತೀನಿ. ಆವಾಗ ಯಾರ್ಯಾರು ಕಂಬಿ ಎಣುಸ್ಬೇಕಾಗುತ್ತೋ ಗೊತ್ತಿಲ್ಲ. ಆಮೇಲೆ ನನ್ನನ್ನ ನಿಷ್ಠೂರ ಮಾಡ್ಬೇಡ್ರೀ, ಮೊದ್ಲೇ ಹೇಳಿರ್ತೀನಿ...' ಎಂದು ಆವಾಜು ಹಾಕಿ ಫೋನನ್ನು ಕುಕ್ಕಿದ. ಶಾಸಕರ ಪವರ್‌ನ ಬಗ್ಗೆ ಉಬ್ಬಿಹೋದ ಶಾಂತವ್ವ ಶಾಂತವಾಗಿ ಶಾಸಕರ ಕಾಲಿಗೆ ಬಿದ್ದು ಆಶೀರ್ವಾದ ಪಡೆದು ಅಂಗಡಿ ಕಡೆ ಹೊರಟಳು.

ಕೊಂಬೆ–13

ಪ್ರಶಾಂತ ನಾಯಕ್ ಎಂಬಾತ ಒಂದು ದಿನ ಇದ್ದಕ್ಕಿದ್ದಂತೆ ಬೆಂಗಳೂರಿನಿಂದ ನನ್ನನ್ನು ಹುಡುಕಿಕೊಂಡು ಬಂದ. ಆತ ಯಾವುದೋ 'ವೃಕ್ಷ ಅಕಾಡೆಮಿ' ಎಂಬ ಒಂದು ಸಂಸ್ಥೆಯನ್ನು ಕಟ್ಟಿಕೊಂಡು ತನ್ನಂಥ ಒಂದಷ್ಟು ನಿಸರ್ಗ ಪ್ರೇಮಿಗಳನ್ನು ಕೂಡಿಸಿಕೊಂಡು ಎನ್‌ಜಿಓ ನಡೆಸುತ್ತಿದ್ದಾನಂತೆ. ಆತ ಮರಗಳ ಗಿಡಗಳ ಎಲೆಗಳಿಗೆ, ಕಾಂಡಕ್ಕೆ ಎಂಥದೋ ಆಧುನಿಕವಾದ ಯಂತ್ರಗಳನ್ನು ಜೋಡಿಸಿ, ಮರಗಿಡಗಳೊಂದಿಗೆ ಸಂವಾದಿಸುತ್ತಾನಂತೆ.

